# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 11/2025

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಗಿರೀಶ್ | ಫ್ರಾಸಾಃ | 06 |
| **ತಂದೆಯ ಹೆಸರುಃ** | ಶ್ರೀನಿವಾಸ | ಚಾಸಾಃ | 02 |
| **ವಯಸ್ಸುಃ** | 23 | ಪ್ರಮಾಣ ವಚನ ಭೋದಿಸಿದ ದಿನಾಂಕ: | 22-08-2025 |
| **ಉದ್ಯೋಗಃ** | ಖಾಸಗಿ | | |
| **ವಾಸ ಸ್ಥಳಃ** | ನೆಮ್ಮಕಾಯಲ ಹಳ್ಳಿ | | |

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಪಿರ್ಯಾದಿ ಹಾಗೂ ಆರೋಪಿತರು ಗೊತ್ತು. 5-6 ತಿಂಗಳ ಹಿಂದೆ ರಾತ್ರಿ 09.00 ಸಮಯಕ್ಕೆ ನಾನು ಮನೆಯಿಂದ ಬಸ್ ನಿಲ್ದಾಣದ  ಕಡೆ ಬರುತ್ತಿದ್ದಾಗ ಚಾಸಾ-1 ರವರು ಸಹ ಆ ಕಡೆ ಬಂದರು. ಆರೋಪಿ ಬಸ್ಸಿನ ಮುಂಭಾಗದಲ್ಲಿ ಕಸಕ್ಕೆ ಬೆಂಕಿ ಹಾಕುತ್ತಿದ್ದ. ಆಗ ಚಾಸಾ-1 ರವರು ಆರೋಪಿಗೆ ಬಸ್ಸಿನ ಬಳಿ ಬೆಂಕಿ ಹಾಕಬೇಡ. ಬಸ್ಸಿಗೆ ಬೆಂಕಿ ಹತ್ತಿಕೊಳ್ಳಬಹುದೆಂದು ಹೇಳಿದಾಗ ಆತ ನಾನು ಹಚ್ಚುತ್ತೇನೆ ಎಂದು ಉಡಾಫೆ ಉತ್ತರ ನೀಡಿದ್ದ. ನಂತರ ಆರೋಪಿ ತನ್ನ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ-1 ರವರ ಕಿವಿಯ ಮೇಲೆ ಹಲ್ಲೆ ಮಾಡಿ, ಜ್ಯೂಸ್ ಅಂಗಡಿಯ ಒಳಗೆ ಹೋಗಿ ಶಟರ್ ಹಾಕಿಕೊಂಡ. ನಂತರ ಚಾಸಾ-7 ರವರು ಆತನನ್ನು ಆಸ್ಪತ್ರೆಗೆ ಸಾಗಿಸಿದ್ದರು. ಆರೋಪಿ ಹಲ್ಲೆ ಮಾಡಲು ಬಳಸಿದ್ದ ಮಚ್ಚು ಈಗ ನೋಡುತ್ತಿದ್ದು ಮು.ಮಾ.01 ಆಗಿದೆ. ಮು.ಮಾ.02 ಚಾಸಾ-1 ರವರ ರಕ್ತ-ಸಿಕ್ತ ಬನಿಯನ್ ಆಗಿರುತ್ತದೆ. ಹೇಳಿಕೆ ನೀಡಿದ್ದೇನೆ. ಸಾಕ್ಷಿ

ಆರೋಪಿಯನ್ನು ಗುರುತಿಸಿದ್ದಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್ ಎಂ ಎನ್ ವಕೀಲರಿಂದ ಪಾಟೀ ಸವಾಲು</u>**

ನಾನು ಚಾಲಕ . ಗಲಾಟೆ ಆದಾಗ ರಾತ್ರಿ 09.00 ಗಂಟೆ. ನಾನು 50 ಮೀ. ದೂರದಲ್ಲಿದ್ದೆ. ಘಟನೆ ನಡೆಯುವಾಗ ನಾನು ಸ್ಥಳದಲ್ಲೆ ಇದ್ದೆ. ಇನ್ನು 30 ಜನ ಇದ್ದರು. ಅವರ ಹೆಸರು ಹೇಳಲು ಆಗುವುದಿಲ್ಲ. ಕತ್ತಲಾಗಿದ್ದರಿಂದ ಗಮನಿಸಲಿಲ್ಲ. ಆ ದಿನ ನಾನು ಕುಡಿದು ಹೋಗಿದ್ದೆ ಎಂದರೆ ಸರಿಯಲ್ಲ. ಚಾಸಾ-1 ನನ್ನ ಮಾವ. ಚಾಸಾ-1 ರವನ್ನು ಅವರ ಮನೆಯವರು , ಸ್ನೇಹಿತರು ಆ್ಯಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿದ್ದರು. ಚಾಸಾ-1 ರವರು ಕೆಳಗೆ ಬಿದ್ದು ಹೋಗಿದ್ದು ಅವರಿಗೆ ಸಹಾಯ ಮಾಡುತ್ತಿದ್ದೆ. ಬಸ್ಸಿನ ಮುಂದೆ ಬೆಂಕಿ ಹಚ್ಚುತ್ತಿದುದ್ದನ್ನು ಪ್ರಶ್ನಿಸಿದಕ್ಕೆ ಈ ಗಲಾಟೆ ಆಗಿರುತ್ತದೆ. ನಾನು ಹಾಗೂ ಚಾಸಾ-1 ರವರು ಸೇರಿ ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಾನು ಘಟನಾ ಸ್ಥಳದಲ್ಲಿ ಇರಲಿಲ್ಲ , ಪಿರ್ಯಾದಿ ನನ್ನ ಮಾವನಾದ ಕಾರಣ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನಮ್ಮ ಊರಿನವನಲ್ಲವಾದ ಕಾರಣ ಆತನ ಮೇಲೆ ನಾವು ಕುಡಿದು ಗಲಾಟೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆತನ ಜ್ಯೂಸ್ ಅಂಗಡಿಯಿಂ ಉಚಿತವಾಗಿ ಜ್ಯೂಸ್ ಕೊಡದ ಕಾರಣ ಸುಳ್ಳು ಆರೋಪ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಮು.ಮಾ .01 ರಿಂದಲೇ ಹಲ್ಲೆ ಆಗಿದೆ ಎಂದು ನಾನು ಯಾವುದೇ ನಿಖರ ಗುರುತು ಇಟ್ಟಿಲ್ಲ. ಆರೋಪಿ ಚಾಸಾ-1 ರವರ ಮೇಲೆ

ಹಲ್ಲೆ ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ….. ಇಲ್ಲ …..**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ22.08.2025

ಸ್ಥಳಃ ಚಿಂತಾಮಣಿ

**(ಕೆ.ಎಂ.ರಾಜಶೇಖರ)**

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.